| 8 | ಛಾಯಾದೇವಿ ಎನ್ | ಡಿ.ನಾಗರಾಜಪ್ಪ | ಬರಗೂರು ಅಟ್ ಪೋಸ್ಟ್, ಹುಲಿಕುಂಟೆ ಹೋಬಳಿ, ಶಿರಾ ತಾಲ್ಲೂಕು, ತುಮಕೂರು | ಶಿರಾ |
| 9 | ಸರಸ್ವತಿ | ಲಕ್ಷ್ಮೀಕಾಂತ | ಐ.ಡಿ.ಹಳ್ಳಿ, ಐ.ಡಿ.ಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು | ಮಧುಗಿರಿ |
| 10 | ವಿಶ್ವನಾಥ | ಸುಬ್ಬರಾಯಪ್ಪ | ಸೂಲನಾಯಕನಹಳ್ಳಿ, ವೈ.ಎನ್.ಹೊಸಕೋಟೆ ಹೋಬಳಿ, ಪಾವಗಡ ತಾಲ್ಲೂಕು | ಪಾವಗಡ |
| 11 | ಅರುಣ್‌ಪ್ರಸಾದ್.ಪಿ | ಪುಷ್ಪರಾಜ್.ಪಿ | ಲೇಬರ್ ಕಾಲೋನಿ, ಕುರಿಪಾಳ್ಯ, ಕಸಬಾ ಹೋಬಳಿ, ತುಮಕೂರು ಟೌನ್, ತುಮಕೂರು ತಾಲ್ಲೂಕು | ತುಮಕೂರು ನಗರ |
| 12 | ಮಂಜುನಾಥ.ಪಿ.ಎನ್ | ನರಸಿಂಹಮೂರ್ತಿ | ಪಕೀರಪ್ಪನಪಾಳ್ಯ, ತುಂಬಾಡಿ ಅಂಚೆ, ಕೊರಟಗೆರೆ ತಾಲ್ಲೂಕು | ಕೊರಟಗೆರೆ |
| 13 | ಶಿವಕುಮಾರ್.ಎಸ್ | ಗಂಗಮ್ಮ | ಬಿ.ಕೆ.ಹಳ್ಳಿ, ನಾಗಲಮಡಿಕೆ ಹೋಬಳಿ, ಪಾವಗಡ ತಾಲ್ಲೂಕು, ತುಮಕೂರು | ಪಾವಗಡ |
| 14 | ನಾಗೇಂದ್ರ ಬಿ.ಸಿ | ಚಿಕ್ಕ ಆಂಜಿನಪ್ಪ | ಬಿದರಕೆರೆ, ಮಿಡಿಗೇಶಿ ಹೋಬಳಿ, ಮಧುಗಿರಿ ತಾಲ್ಲೂಕು | ಮಧುಗಿರಿ |
| 15 | ಕುಮಾರ.ಎಂ.ಹೆಚ್ | ಹನುಮಂತಯ್ಯ | ಮೇಲನಹಳ್ಳಿ, ಹುಳಿಯಾರು ಹೋಬಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು | ಚಿಕ್ಕನಾಯಕನಹಳ್ಳಿ |
| 16 | ಲಕ್ಷ್ಮೀಕುಮಾರ | ಸ್ವಾರಪ್ಪ | ಮದ್ದೇ, ನಿಡಗಲ್ ಹೋಬಳಿ, ಪಾವಗಡ ತಾಲ್ಲೂಕು, ತುಮಕೂರು | ಪಾವಗಡ |
| 17 | ವಿಜಯ ಭಾಸ್ಕರ್ | ನರಸಿಂಹಯ್ಯ | ಹಿರೇಬಿದರೆ, ಕಸಬಾ ಹೋಬಳಿ, ತಿಪಟೂರು ತಾಲ್ಲೂಕು, ತುಮಕೂರು | ತಿಪಟೂರು |
| 18 | ಶಿವಕುಮಾರ ಈ | ಈರಣ್ಣ | - | ಪಾವಗಡ |
| 19 | ಚಂದ್ರಶೇಖರ ಹೆಚ್.ಬಿ | ಬಸವಯ್ಯ | - | ಗುಬ್ಬಿ |
| 20 | ಪ್ರದೀಪ ಎಂ.ಎಸ್ | ಶೇಖರಯ್ಯ | - | ಚಿಕ್ಕನಾಯಕನಹಳ್ಳಿ |
| 21 | ಜಿ.ಬಸವರಾಜು | ಗಂಗಹನುಮಯ್ಯ | - | ತುಮಕೂರು ನಗರ |
| 22 | ಕೃಷ್ಣಮೂರ್ತಿ.ಡಿ | ದಾಸಪ್ಪ | - | ಪಾವಗಡ |
| 23 | ಶಶಿಕುಮಾರ ಎನ್ | ನರಸಿಂಹಯ್ಯ | - | ಮಧುಗಿರಿ |
| 24 | ರಮೇಶ್.ಎಸ್.ಆರ್. | ರಂಗನಾಥಪ್ಪ | - | ಮಧುಗಿರಿ |
| 25 | ಮಧು.ಎಂ.ಎನ್ | ನರಸಣ್ಣ | - | ಪಾವಗಡ |
| 26 | ಹರಿ ಪ್ರಸಾದ್.ಡಿ.ಎಂ | ಮಂಜುನಾಥ.ಡಿ.ಎನ್ | - | ಶಿರಾ |
| 27 | ಮನಿತ್ ಪಿ | ಪುಟ್ಟಯ್ಯ | - | ಕೊರಟಗೆರೆ |

ಅನುಬಂಧ-8

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ತುಮಕೂರು

2018-19ನೇ ಸಾಲಿನ ಸಮೃದ್ಧಿ ಯೋಜನೆ

| SL No. | District | franchisee/company name | Application number | Constituency | Beneficiary name | Address |
|---|---|---|---|---|---|---|
| 1 | Tumkur | Milkyway Express | 14778 | C.N.HALLI | RAGHAVENDRA D R (PH) | Ward No. 18, Kalammanagudibeedi, C.N.Halli Town |
| 2 | Tumkur | Chai Point | 24916 | MADHUGIRI | MANJUNATHA K N | Madhugiri purasabhe 12rd ward, VRST Road, Venkateshwara temple near, Madhugiri |
| 3 | Tumkur | Chickpet Donne Biryani House | 7116 | TURUVEKERE | BHARATH M R | Sowmyashree Daba Varahasandra, Kalluru cross, Kadaba hobli, Gubbi tq. |
| 4 | Tumkur | KMF | 5184 | GUBBI | K.R RAMYA | Hoskere Gramapanchayath Malige Hoskere, Hagalawadi Hobli, Gubbi Taluk |
| 5 | Tumkur | KMF | 34892 | TURUVEKERE | MANJULA K N | Ward No. 06, Beemasandra, B.H.Road Tumkur Town, |
| 6 | Tumkur | KMF | 31089 | C.N.HALLI | ASHA D M | Kenchambanagara, Huliyaru, C.N.Halli Taluk |
| 7 | Tumkur | KMF | 22797 | TUMKUR TOWN | CHANDRASHEKAR | Maraluru, Kunigal Road, Tumkur Town |
| 8 | Tumkur | TAMARA FASHIONS | 33930 | TUMKUR TOWN | RAMACHANDRA A P | Krishnanagara, Kaveri Grameena Bank Near, 1st cross, 1st Main No.24 Tumkur |
| 9 | Tumkur | LETS TRANSPORT | 35083 | MADHUGIRI | K G PRASHANTH | KODIGENAHALLI VILLAGE & HOBLI, |
| 10 | Tumkur | BLACK BIRD | 14129 | KORATAGERE | SANGEETHA B N | Hanumanthapura, koratagere |
| 11 | Tumkur | PUMPKART | 11201 | Gubbi | VINAY M S | Manchaladore, (Gramapanchayath Buildin Opp.) Gubbi Tq. |
| 12 | Tumkur | UDUPI BAKERY AND SWEETS | 20175 | KORATAGERE | HEMANTH KUMAR D A | Dibburu, Tumkur Town (Opp. Lakshmi Narasimha swamy temple) |
| 13 | Tumkur | LETS TRANSPORT | 2530 | MADHUGIRI | GURUPRASAD S. J | Shivanagere, Dodderi Hobli, Madhugiri Tq. |
| 14 | Tumkur | CHAT OK PLEASE | 16501 | TUMKUR TOWN | VANI M | Harakere, Kasaba Hobli, Tumkur Tq |
| 15 | Tumkur | UDUPI BAKERY AND SWEETS | 22165 | C.N.Halli | RANGANATHA M N | C.N.Halli Town, C.N.Halli Taluk |
| 16 | Tumkur | KMF | 22798 | KORATAGERE | MAHESH | Batawadi 80 feet Road, Near Anjandri Driving school, Tumkur Town |
| 17 | Tumkur | KMF | 22798 | GUBBI | DIVYA K | Cheluru Hobli, Gubbi Tq. |
| 18 | Tumkur | KMF | 22798 | TURUVEKERE | RAKEHSKUMAR K S | Saraswathipuram, 2nd Main Road, |
| 19 | Tumkur | KMF | 22798 | PAVAGADA | RAVI G O | Sapthagiri Badavane, T.P.Kylasam road, Tumkur town |
| 20 | Tumkur | TAMARA FASHIONS | 27047 | PAVAGADA | AMRUTHA | C.K.Pura, Nidugal Hobli, Pavagada Taluk |
| 21 | Tumkur | UDUPI BAKERY AND SWEETS | 27035 | PAVAGADA | Gayithramma | C.K.Pura, Nidugal Hobli, Pavagada Taluk |
| 22 | Tumkur | KMF | 31036 | TUMKUR RURAL | UMESH K.R | KUNDURU, BELAGUMBA POST, KASABA HOBLI, TUMKUR TQ |
| 23 | Tumkur | LETS TRANSPORT | 17313 | TIPTUR | THAMMAIAH H R | HURALIHALLI, TIPTUR TQ. TUMKUR DISTRICT |

Managing Director

**<u>ಅನುಬಂಧ-೩</u>**

**<u>ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ</u>**

| ಕ್ರ.ಸಂ | ಫಲಾಪೇಕ್ಷಿಯ ಹೆಸರು | ವಿಳಾಸ |
|---|---|---|
| 1 | ಆಂಜನೇಯಲು ಬಿನ್ ವೆಂಕಟೇಶ್, | ವಿನಾಯಕನಗರ, ಪಾವಗಡ ತಾಲ್ಲೂಕು |

ಅನುಬಂಧ-2

ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ

# ಸಮೃದ್ಧಿ ಯೋಜನೆಯಡಿ ತುಮಕೂರು ಜಿಲ್ಲೆಯಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿ

| ಕ್ರ ಸಂ | ಜಿಲ್ಲೆ | ಫಲಾನುಭವಿಗಳ ಹೆಸರು ಮತ್ತು ವಿಳಾಸ |
|---|---|---|
| 1 | ತುಮಕೂರು | ಅನಂತರಾಜ್ ಎಂ. ಹೆಚ್ ಬಿನ್ ಹನುಮಂತಪ್ಪ, ಮರಿದಾಸನಹಳ್ಳಿ ಗ್ರಾಮ, ಪಾವಗಡ, ತುಮಕೂರು |
| 2 | ತುಮಕೂರು | ರವಿಕುಮಾರ್ ಹೆಚ್. ಪಿ ಬಿನ್ ಪೆದ್ದಣ್ಣ, ಹೊಸಹಳ್ಳಿ, ಕೊರಟಗೆರೆ, ತುಮಕೂರು |
| 3 | ತುಮಕೂರು | ಕೀರ್ತಿ ಕೆ.ಎಸ್, ಕೊಟನಾಯಕನಹಳ್ಳಿ, ತಿಪಟೂರು ತಾ: ತುಮಕೂರು ಜಿಲ್ಲೆ |
| 4 | ತುಮಕೂರು | ಶಿವಲಿಂಗಪ್ಪ ಪಿ.ಬಿ ಬಿನ್ ಬಾಬಣ್ಣ, ಪೋಲೇನಹಳ್ಳಿ, ಮಧುಗಿರಿ ತಾ: ತುಮಕೂರು ಜಿ: |
| 5 | ತುಮಕೂರು | ಎಂ. ಶಿವಲಿಂಗಯ್ಯ ಬಿನ್ ಮಲ್ಲಪ್ಪ, ವಿಜಯನಗರ, ತುಮಕೂರು ಟೌನ್ |
| 6 | ತುಮಕೂರು | ಹನುಮಮೂರ್ತಿ ವಿ.ಹೆಚ್ |
| 7 | ತುಮಕೂರು | ಸಿದ್ದರಾಜ್ ಕೆಂಪಯ್ಯ, ಶೇಷನಹಳ್ಳಿ ಗ್ರಾಮ, ಗುಬ್ಬಿ ತಾ: ತೂಮಕೂರು ಜಿ: |
| 8 | ತುಮಕೂರು | ಪುಟ್ಟರಾಜಪ್ಪ ಕೆ.ಎನ್ ಬಿನ್ ಲೇ. ನರಸಿಂಹಯ್ಯ, ಕೊಡಗೇನಹಳ್ಳಿ ಗ್ರಾಮ, ಮಧೂಗಿರಿ ತಾ: ತುಮಕೂರು ಜಿಲ್ಲೆ. |
| 9 | ತುಮಕೂರು | ಹನುಮಂತರಾಯಪ್ಪ ಬಿನ್ ರಂಗಪ್ಪ, ದೇವರಬೆಟ್ಟ ಗ್ರಾಮ, ಪಾವಗಡ ತಾ: ತುಮಕೂರು ಜಿಲ್ಲೆ. |
| 10 | ತುಮಕೂರು | ಪವಿತ್ರ ಜೆ ಬಿನ್ ಹೆಚ್ ಕೆ. ಜಯಪ್ರಕಾಶ್, ಶಾಂತಿನಗರ, ತುಮಕೂರು ಟೌನ್ |
| 11 | ತುಮಕೂರು | ಶೇಖರ್ ಆರ್ ಬಿನ್ ರಾಮಯ್ಯ, ನಾಗಲಾಪುರ ಗ್ರಾಮ, ತುರುವೇಕೆರೆ ತಾ: ತುಮಕೂರು ಜಿಲ್ಲೆ. |
| 12 | ತುಮಕೂರು | ಪ್ರಕಾಶ್ ಕೆ.ಆರ್ ಬಿನ್ ರಂಗಪ್ಪ, ಕ್ಯಾದಿಗುಂಟೆ, ಶಿರಾ ತಾ: ತುಮಕೂರು ಜಿಲ್ಲೆ |
| 13 | ತುಮಕೂರು | ಶ್ರೀಕಾಂತ ಕೆ ಬಿನ್ ಕೋದಂಡಪ್ಪ, ಮರಳೂರು ದಿಣ್ಣೆ, ತುಮಕೂರು ಟೌನ್ |
| 14 | ತುಮಕೂರು | ಜಯಪ್ರಕಾಶ್ ಕೆ.ಎನ್ ಬಿನ್ ನರಸಿಂಹಮೂರ್ತಿ, ಕೆಸ್ತೂರು ಗ್ರಾಮ, ತುಮಕೂರು ತಾ: & ಜಿ: |
| 15 | ತುಮಕೂರು | ಚಂದ್ರಯ್ಯ ಎಸ್. ಹೆಚ್ ಬಿನ್ ಹನುಮಂತರಾಯಪ್ಪ, ಸಂಕೇನಹಳ್ಳಿ ಗ್ರಾಮ, ಮಧುಗಿರಿ ತಾ: ತುಮಕೂರು ಜಿಲ್ಲೆ. |
| 16 | ತುಮಕೂರು | ಶ್ರೀಧರ್ ಡಿ.ವಿ |
| 17 | ತುಮಕೂರು | ಶಂಕರಪ್ಪ ಬಿ.ಕೆ ಬಿನ್ ಕುಮಾರಸ್ವಾಮಿ, ಬರಕನಹಾಳ್ ಗ್ರಾಮ, ಚಿಕ್ಕನಾಯಕನಹಳ್ಳಿ ತಾ, ತುಮಕೂರು ಜಿಲ್ಲೆ. |
| 18 | ತುಮಕೂರು | ಕೆ.ಎಲ್. ನಂದೀಶಯ್ಯ ಬಿನ್ ಖಾದ್ರಿ ನರಸಿಂಹಯ್ಯ, ಕೊಡಗೇನಹಳ್ಳಿ ಗ್ರಾಮ, ಮಧೂಗಿರಿ ತಾ: ತುಮಕೂರು ಜಿಲ್ಲೆ. |
| 19 | ತುಮಕೂರು | ಜಯಶಂಕರ್ ಎಂ.ಸಿ |
| 20 | ತುಮಕೂರು | ಕಿರಣ್ ಎಂ.ಎನ್ |

ವ್ಯವಸ್ಥಾಪಕ ನಿರ್ದೇಶಕರು

# ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 578(628) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17.12.2021 |
| ವಿಷಯ | : | ಸಮೃದ್ಧಿ ಯೋಜನೆಯ ಫಲಾನುಭವಿಗಳಿಗೆ ಪರಿಹಾರ ಧನ ವಿತರಿಸದೆ ಇರುವ ಬಗ್ಗೆ. |
| ಉತ್ತರಿಸಬೇಕಾದವರು | : | ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ನಿಗಮಗಳಲ್ಲಿ ಜಾರಿಯಲ್ಲಿರುವ ಸಹಾಯನುಧನದ ಯೋಜನೆಗಳಾವುವು; (ಯೋಜನಾವಾರು ಮಾಹಿತಿ ನೀಡುವುದು) | ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಜಾರಿಯಲ್ಲಿರುವ ಯೋಜನೆಗಳ ಮಾಹಿತಿಯು ಅನುಬಂಧ-1ರಲ್ಲಿ ಲಗತ್ತಿಸಿದೆ. |
| ಆ) | ಸಮೃದ್ಧಿ ಯೋಜನೆ ಎಂದರೇನು; ಈ ಯೋಜನೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ; ಇದರ ರೂಪು ರೇಷೆಗಳೇನು; ಹಾಲಿ ಸದರಿ ಯೋಜನೆಯು ಜಾರಿಯಲಿದೆಯೇ; (ವಿವರವಾದ ಮಾಹಿತಿ ನೀಡುವುದು) | • ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವಕ ಯುವತಿಯರಿಗೆ ವಿವಿಧ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ಹಾಗೂ ಲಾಭದಾಯಕವಾಗಿ ನಡೆಸಲು ಅಗತ್ಯವಾದ ಉದ್ಯಮಶೀಲತಾ ತರಬೇತಿ/ವೃತ್ತಿ ಕೌಶಲ್ಯ ತರಬೇತಿಯನ್ನು ನೀಡಿ ಮಾರುಕಟ್ಟೆ ವ್ಯವಸ್ಥೆಯೊಂದಿಗೆ ಘಟಕಗಳನ್ನು ಸೃಷ್ಟಿಸುವ ವ್ಯವಸ್ಥೆಯೇ ಸಮೃದ್ಧಿ ಯೋಜನೆ.<br>• ಸದರಿ ಯೋಜನೆಯನ್ನು 2018-19ನೇ ಸಾಲಿನಿಂದ ಜಾರಿಗೆ ತರಲಾಗಿದೆ.<br>• ಈ ಯೋಜನೆಯ ರೂಪು ರೇಷೆಗಳಿರುವ ಸರ್ಕಾರದ ಆದೇಶ ಸಂಖ್ಯೆ: ಸಕಇ 353 ಎಸ್‌ಡಿಸಿ 2018 (1), ದಿನಾಂಕ:25.10.2018ರ ಪ್ರತಿಯನ್ನು ಲಗತ್ತಿಸಿದೆ.<br>• ಪ್ರಸಕ್ತ ಸಾಲಿನಲ್ಲಿ ಜಾರಿಯಲ್ಲಿ ಇರುವುದಿಲ್ಲ. |
| ಇ) | 2015ನೇ ಸಾಲಿನಿಂದ ಮೈಸೂರು ಮತ್ತು ತುಮಕೂರು ಜಿಲ್ಲೆಯಲ್ಲಿ ಸಮೃದ್ಧಿ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳು ಯಾರು ಯಾರು; (ಹೆಸರು, ವಿಳಾಸ, ಯೋಜನೆಯೊಂದಿಗೆ ವರ್ಷವಾರು ಮಾಹಿತಿ ನೀಡುವುದು) | "ಸಮೃದ್ಧಿ" ಯೋಜನೆಯನ್ನು 2018-19ನೇ ಸಾಲಿನಲ್ಲಿ ಮಾತ್ರ ಅನುಷ್ಟಾನಗೊಳಿಸಿದ್ದು, ಮೈಸೂರು ಮತ್ತು ತುಮಕೂರು ಜಿಲ್ಲೆಯಲ್ಲಿ ಆಯ್ಕೆಗೊಂಡ ಫಲಾನುಭವಿಗಳ ವಿವರಗಳನ್ನು ಅನುಬಂಧ-2 ಮತ್ತು 3 ರಲ್ಲಿ ಲಗತ್ತಿಸಿದೆ. |

| | | |
|---|---|---|
| ಈ) | ಸದರಿ ಯೋಜನೆಯಲ್ಲಿ ಆಯ್ಕೆಯಾದ ಎಷ್ಟು ಫಲಾನುಭವಿಗಳಿಗೆ ಈಗಾಗಲೇ ಸಹಾಯಧನ ವಿತರಣೆ ಮಾಡಲಾಗಿದೆ; ಉಳಿದವರೆಷ್ಟು; ಇವರಿಗೆ ವಿತರಣೆ ಮಾಡದಿರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ವಿತರಣೆ ಮಾಡಲಾಗುವುದು; (ವಿವರವಾದ ಮಾಹಿತಿ ನೀಡುವುದು) | • ಸಮೃದ್ಧಿ ಯೋಜನೆಯಡಿ 463 ಫಲಾನುಭವಿಗಳಿಗೆ ಸಹಾಯಧನ ವಿತರಣೆ ಮಾಡಲಾಗಿದೆ. 167 ಫಲಾಪೇಕ್ಷಿಗಳು ಬಾಕಿ ಉಳಿದಿರುತ್ತಾರೆ.<br>• ಫಲಾಪೇಕ್ಷಿಗಳು ಫ್ರಾಂಚೈಸಿ ಸಂಸ್ಥೆಗಳನ್ನು (ಕಂಪನಿ) ಬದಲಾವಣೆ ಮಾಡುತ್ತಿರುವ್ಯದು, ಫಲಾಪೇಕ್ಷಿಗಳು ಅಂಗಡಿ/ಮಳಿಗೆ ಗುರುತಿಸುವಲ್ಲಿ ವಿಳಂಬವಾಗುತ್ತಿದೆ.<br>• ಕೆಲವು ಕಂಪನಿಯವರು ವ್ಯಾಪಾರದ ದೃಷ್ಟಿಯಿಂದ ಫಲಾಪೇಕ್ಷಿಗಳು ಗುರ್ತಿಸಿದ ಮಳಿಗೆಯನ್ನು ತಿರಸ್ಕರಿಸುತ್ತಿರುವುದರಿಂದ ಮತ್ತೊಂದು ಮಳಿಗೆಯನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ವಿಳಂಬವಾಗುತ್ತಿದೆ.<br>• ಫಲಾಪೇಕ್ಷಿಗಳು ಎಸ್ಕ್ರೋ ಬ್ಯಾಂಕ್ ಖಾತೆ ತೆರೆಯಲು ವಿಳಂಬ ಮಾಡಿರುವುದರಿಂದ ವಿಳಂಬವಾಗಿದೆ.<br>• ಮೇಲಿನ ಕಾರಣಗಳಿಂದ ಯೋಜನೆಯ ಪೂರ್ಣ ಗುರಿ ಸಾಧಿಸುವಲ್ಲಿ ವಿಳಂಭವಾಗಿದ್ದು, ಸದರಿ ಯೋಜನೆಯನ್ನು ಮಾರ್ಚ್-2022ರ ಅಂತ್ಯದೊಳಗೆ ಪೂರ್ಣಗೊಳಸಲಾಗುವುದು. |
| ಉ) | 2019 ರಿಂದ ಇಲ್ಲಿಯವರೆಗೆ ಸದರಿ ಯೋಜನೆಯಡಿ ಅರ್ಜಿಗಳನ್ನು ಕರೆಯದಿರಲು ಕಾರಣಗಳೇನು? (ವಿವರವಾದ ಮಾಹಿತಿ ನೀಡುವುದು) | 2019-20ನೇ ಸಾಲಿನಲ್ಲಿ ಮಾತ್ರ ಸಮೃದ್ಧಿ ಯೋಜನೆಯಡಿ ಅನುದಾನ ಬಿಡುಗಡೆಯಾಗಿದ್ದು, ನಂತರದಲ್ಲಿ ಸರ್ಕಾರದಿಂದ ಅನುದಾನ ನಿಗದಿಯಾಗದೆ ಇರುವ ಕಾರಣ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ. |

ವ್ಯವಸ್ಥಾಪಕ ನಿರ್ದೇಶಕರು

## ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

### ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | 578 (628) |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.12.2021 |
| ಉತ್ತರಿಸುವ ಸಚಿವರು | ಮಾನ್ಯ ಸಮಾಜ ಕಲ್ಯಾಣ ಸಚಿವರು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ನಿಗಮದಲ್ಲಿ ಜಾರಿಯಲ್ಲಿರುವ ಸಹಾಯನುಧನದ ಯೋಜನೆಗಳಾವುವು;<br>(ಯೋಜನಾವಾರು ಮಾಹಿತಿ ನೀಡುವುದು) | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಮಾಹಿತಿಯನ್ನು ಅನುಬಂಧ-1ರಲ್ಲಿ ಉತ್ತರಿಸಿದೆ. |
| ಆ) | ಸಮೃದ್ಧಿ ಯೋಜನೆ ಎಂದರೇನು; ಈ ಯೋಜನೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ; ಇದರ ರೂಪು ರೇಷೆಗಳೇನು; ಹಾಲಿ ಸದರಿ ಯೋಜನೆಯು ಜಾರಿಯಲ್ಲಿದೆಯೇ;<br>(ವಿವರವಾದ ಮಾಹಿತಿ ನೀಡುವುದು) | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಗ್ರಾಮೀಣ/ನಗರ ಪ್ರದೇಶಗಳಲ್ಲಿನ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ/ಯುವತಿಯರನ್ನು ಉದ್ಯಮ ಶೀಲರನ್ನಾಗಿಸಲು 2018-19ನೇ ಸಾಲಿನಲ್ಲಿ "ಸಮೃದ್ಧಿ ಯೋಜನೆ" ಅನುಷ್ಠಾನಗೊಳಿಸಲು ಉದ್ದೇಶಿಸಿ ಸರ್ಕಾರದ ಆದೇಶದ ಸಂಖ್ಯೆ:ಸಕಇ 353 ಎಸ್ ಡಿ ಸಿ 2018(1), ಬೆಂಗಳೂರು, ದಿನಾಂಕ:25/10/2018 ರಂತೆ ಜಾರಿಗೆ ತರಲಾಗಿರುತ್ತದೆ.<br><br>ಸದರಿ ಯೋಜನೆಯಡಿ ಪರಿಶಿಷ್ಟ ಪಂಗಡದ ನಿರುದ್ಯೋಗಿಗಳಿಗೆ ವಿವಿಧ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ಹಾಗೂ ಲಾಭದಾಯಕವಾಗಿ ನಡೆಸಲು ಅಗತ್ಯವಾದ ಉದ್ಯಮಶೀಲತಾ ತರಬೇತಿ/ವೃತ್ತಿ ಕೌಶಲ್ಯ ತರಬೇತಿಯನ್ನು ನೀಡಿ ಮಾರುಕಟ್ಟೆ ವ್ಯವಸ್ಥೆಯೊಂದಿಗೆ ಘಟಕಗಳನ್ನು ಸೃಷ್ಟಿಸಲು ವ್ಯವಸ್ಥೆ ಮಾಡಲಾಗುವುದು. ಸದರಿಯೋಜನೆಯಡಿ ವಿವಿಧ ಉದ್ದೇಶಗಳಡಿ ಯೋಜನೆಗಳನ್ನು ರೂಪಿಸಲಾಗಿದೆ. ಉತ್ತಮ ಮಾರುಕಟ್ಟೆ ಹೊಂದಿರುವ ಸರ್ಕಾರಿ ಮತ್ತು ಖಾಸಗಿ ಬ್ರಾಂಡೆಡ್ ಸಂಸ್ಥೆಗಳ ಸಹಯೋಗದಲ್ಲಿ ಫ್ರಾಂಚೈಸಿ/ಡೀಲರ್‌ಶಿಪ್ ವ್ಯವಸ್ಥೆಯೊಂದಿಗೆ ರಿಟೈಲ್ ವ್ಯಾಪಾರಿ ಮಳಿಗೆಗಳನ್ನು ಆರಂಭಿಸಲು ಅಗತ್ಯವಾದ ತಾಂತ್ರಿಕ ಬೆಂಬಲ ಹಾಗೂ ಆರ್ಥಿಕ ಬೆಂಬಲ ನೀಡಿ ಯಶಸ್ವಿ ಉದ್ದಿಮೆದಾರರನ್ನಾಗಿ ಮಾಡುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಈಗಾಗಲೇ ಸರ್ಕಾರಿ ಮತ್ತು ಬ್ರಾಂಡೆಡ್ ಸಂಸ್ಥೆಗಳ ಜೊತೆ ಸರ್ಕಾರವು ಒಡಂಬಡಿಕೆ (ಎಂಒಯು) ಮಾಡಿಕೊಳ್ಳಲು ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಆಯ್ಕೆಯಾದ ಪ್ರತಿ ಫಲಾನುಭವಿಗೆ ಗರಿಷ್ಠ ರೂ.10.00 ಲಕ್ಷಗಳವರೆಗೆ ಆರ್ಥಿಕ ಬೆಂಬಲ ಒದಗಿಸಲಾಗುತ್ತದೆ.<br><br>**ಸಾಮಾನ್ಯ ಅರ್ಹತೆಗಳು:**<br>1.ಅರ್ಜಿದಾರರು ಪರಿಶಿಷ್ಟ ಪಂಗಡದ ಜಾತಿಗಳಿಗೆ ಸೇರಿದವರಾಗಿರಬೇಕು.<br>2.ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.<br>3.ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು.<br>3.ವಯಸ್ಸು ಕನಿಷ್ಠ 21 ವರ್ಷಗಳು, ಗರಿಷ್ಠ 50 ವರ್ಷಗಳು.<br>4.ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ರೂ.5.00 ಲಕ್ಷಗಳ ಮಿತಿಯೊಳಗಿರತಕ್ಕದ್ದು. |

| | | |
|---|---|---|
| | | 5.ಅರ್ಜಿದಾರರು/ಕುಟುಂಬದ ಅವಲಂಭಿತ ಯಾವುದೇ ಸದಸ್ಯರು ಕಳೆದ ಮೂರು ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ನಿಗಮಗಳಿಂದ ವಿವಿಧ ಯೋಜನಗಳಡಿಯಲ್ಲಿ ರೂ.1.00/- ಲಕ್ಷಕ್ಕಿಂತ ಮೇಲ್ಪಟ್ಟ ಸಹಾಯಧನ/ಸಾಲ ಪಡೆದವರು ಈ ಯೋಜನೆ ಅಡಿ ಸೌಲಭ್ಯ ಪಡೆಯಲು ಅರ್ಹರಲ್ಲ.<br><br>**ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ:-**<br>ಹೆಚ್ಚಿನ ವಿದ್ಯಾರ್ಹತೆ ಮತ್ತು ವಯೋಮಾನವನ್ನು ಆಧರಿಸಿ ಜೇಷ್ಠತಾ ಪಟ್ಟಿ ಸಿದ್ದಪಡಿಸಿ. ಅದರಂತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು. ಮಳಿಗೆಗಳನ್ನು ನಡೆಸಲು ಸ್ವಂತ/ಬಾಡಿಗೆ ಸ್ಥಳ ಹೊಂದಿರುವವರಿಗೆ ಆದ್ಯತೆ ನೀಡುವುದು.<br><br>**ಇತರ ಷರತ್ತುಗಳು:**<br>1.ಆಯ್ಕೆಯಾದ ಅಭ್ಯರ್ಥಿಗಳು ಷರತ್ತುಗಳನ್ವಯ ಮಳಿಗೆಗಳನ್ನು ನಡೆಸತಕ್ಕದ್ದು.<br>2.ಸಮೃದ್ದಿ ಯೋಜನೆ ಅಡಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವುದು ಮತ್ತು ವ್ಯವಸ್ಥಾಪಕ ನಿರ್ದೇಶಕರು. ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಇವರು ಇತರೆ ನಿಗಮಗಳ ಪರವಾಗಿ ಈ ಬಗ್ಗೆ ಸಮನ್ವಯಾಧಿಕಾರಿಯಾಗಿ ಕಾರ್ಯನಿರ್ವಹಿಸತಕ್ಕದ್ದು.<br>ಮೇಲ್ಕಂಡ ಮಾನದಂಡಗಳಂತೆ ಅರ್ಹ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ ನಿಗಧಿತ ಗುರಿಯಂತೆ ಆಯ್ಕೆ ಮಾಡಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. |
| ಇ) | 2015ನೇ ಸಾಲಿನಿಂದ ಮೈಸೂರು ಮತ್ತು ತುಮಕೂರು ಜಿಲ್ಲೆಯಲ್ಲಿ ಸಮೃದ್ಧಿ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳು ಯಾರು ಯಾರು;(ಹೆಸರು, ವಿಳಾಸ, ಯೋಜನೆಯೊಂದಿಗೆ ವರ್ಷವಾರು ಮಾಹಿತಿ ನೀಡುವುದು) | ಸಮೃದ್ಧಿ ಯೋಜನೆಯನ್ನು 2018-19ನೇ ಸಾಲಿನಲ್ಲಿ ಜಾರಿಯಲ್ಲಿದ್ದು ಮೈಸೂರು ಜಿಲ್ಲೆಯಲ್ಲಿ ಆಯ್ಕೆಗೊಂಡ ಫಲಾನುಭವಿಗಳ ಮಾಹಿತಿಯನ್ನು ಅನುಬಂಧ-2ರಲ್ಲಿ ಮತ್ತು ತುಮಕೂರು ಜಿಲ್ಲೆಯಲ್ಲಿ ಆಯ್ಕೆಗೊಂಡ ಫಲಾನುಭವಿಗಳ ಮಾಹಿತಿಯನ್ನು ಅನುಬಂಧ-3ರಲ್ಲಿ ಉತ್ತರಿಸಿದೆ. |
| ಈ) | ಸದರಿ ಯೋಜನೆಯಲ್ಲಿ ಆಯ್ಕೆಯಾದ ಎಷ್ಟು ಫಲಾನುಭವಿಗಳಿಗೆ ಈಗಾಗಲ್ಲೇ ಸಹಾಯಧನ ವಿತರಣೆ ಮಾಡಲಾಗಿದೆ; ಉಳಿದವರೆಷ್ಟು; ಇವರಿಗೆ ವಿತರಣೆ ಮಾಡದಿರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ವಿತರಣೆ ಮಾಡಲಾಗುವುದು;(ವಿವರವಾದ ಮಾಹಿತಿ ನೀಡುವುದು) | ನಿಗಮದಲ್ಲಿ ಸದರಿ ಯೋಜನೆಯಡಿ 447 ಪರಿಷ್ಕೃತ ಗುರಿಯಾಗಿದ್ದು, ಅದರಲ್ಲಿ ಈಗಾಗಲ್ಲೇ ಒಟ್ಟು 430 ಫಲಾನುಭವಿಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಉಳಿದಂತ ಆಯ್ಕೆಗೊಂಡ 17 ಫಲಾನುಭವಿಗಳ ಘಟಕ ಸ್ಥಾಪನೆಗೆ ಸಂಬಂಧಪಟ್ಟಂತೆ ಫ್ರಾಂಚೈಸಿ ಬದಲಾವಣೆ ಕೋರಿರುವುದು, ಮಳಿಗೆಯನ್ನು ಸ್ಥಾಪಿಸಲು ಸ್ಥಳ ನಿಗಧಿಗೊಳಿಸದಿರುವುದು, ಎಸ್ಕ್ರೋ ಬ್ಯಾಂಕಿನ ಖಾತೆ ತೆರೆಯದಿರುವುದು ಇತ್ಯಾದಿ ಕೆಲಸಗಳನ್ನು ಪೂರ್ಣಗೊಳಿಸದಿರುವ ಕಾರಣ ಸಹಾಯಧನವನ್ನು ಬಿಡುಗಡೆ ಮಾಡಿರುವುದಿಲ್ಲ. ಫಲಾನುಭವಿಗಳು ಘಟಕ ಸ್ಥಾಪನೆ ಪೂರ್ಣಗೊಳಿಸಿದ ಕೂಡಲೇ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು. |
| ಉ) | 2019 ರಿಂದ ಇಲ್ಲಿಯವರೆಗೆ ಸದರಿ ಯೋಜನೆಯಡಿ ಅರ್ಜಿಗಳನ್ನು ಕರೆಯದಿರಲು ಕಾರಣಗಳೇನು?<br>(ವಿವರವಾದ ಮಾಹಿತಿ ನೀಡುವುದು) | 2019-20ನೇ ಸಾಲಿನಿಂದ ಇಲ್ಲಿಯವರೆಗೆ ಸದರಿ ಯೋಜನೆ ಅನುಷ್ಠಾನಕ್ಕಾಗಿ ಸರ್ಕಾರವು ಅನುದಾನ ಬಿಡುಗಡೆ ಮಾಡದಿರುವ ಪ್ರಯುಕ್ತ ಅರ್ಜಿಗಳನ್ನು ಅಹ್ವಾನಿಸಿರುವುದಿಲ್ಲಾ. |

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ
# 10, 3ನೇ ಮಹಡಿ, ಖಾದಿ ಭವನ, ವಸಂತನಗರ, ಬೆಂಗಳೂರು-560 052
ದೂರವಾಣಿ ಸಂಖ್ಯೆ: 08029901193
ಇ-ಮೇಲ್:mdkmvstdc@gmail.com / ವೆಬ್‌ಸೈಟ್: https://kmvstdcl.karnataka.gov.in/

ಸಂಖ್ಯೆ:ಕಮವಾಪಪಂಮಅನಿ:ಸಿ&ಆ:ಚು.ರ.ಪ್ರ.ಸಂ:578(628):2021-22/145/17 ದಿನಾಂಕ: 09.12.2021

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ : ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ **ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ)** ಇವರು ಮಂಡಿಸಿರುವ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:**578(628)** ಕ್ಕೆ ಉತ್ತರಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ : ತಮ್ಮ ಕಾರ್ಯಾಲಯದ ಪತ್ರ ಸಂಖ್ಯೆ:ಎಲ್‌ಸಿಕ್ಯೂ/628/145ನೇಅ/2021, ದಿನಾಂಕ: 04.12.2021

******

ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ **ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ)** ಇವರು ಮಂಡಿಸಿರುವ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:**578(628)**ಕ್ಕೆ ನಿಗಮದ ಉತ್ತರಗಳನ್ನು ಸಿದ್ದಪಡಿಸಿ, ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು

ಅಡಕ: ಮೇಲಿನಂತೆ,

# ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

## ಅನುಬಂಧ-1

**2021-22ನೇ ಸಾಲಿನಲ್ಲಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು**

1. ಸ್ವಯಂ ಉದ್ಯೋಗ ಕಾರ್ಯಕ್ರಮಗಳು-
   ಅ. ಸ್ವಯಂ ಉದ್ಯೋಗ ನೇರಸಾಲ ಯೋಜನೆ
   ಆ. ಸ್ವಯಂ ಉದ್ಯೋಗ ಉದ್ಯಮಶೀಲತಾ ಅಭಿವೃದ್ಧಿ ಯೋಜನೆ (ಸಹಾಯಧನ ರೂ.2.00ಲಕ್ಷ)
   ಇ. ಉದ್ಯಮಶೀಲತಾ ಅಭಿವೃದ್ಧಿ ಯೋಜನೆ (ಸಹಾಯಧನ ರೂ.3.50ಲಕ್ಷ)
2. ಭೂ ಒಡೆತನ ಯೋಜನೆ (ಪೃಥ್ವಿ).
3. ಸಮಗ್ರ ಗಂಗಾ ಕಲ್ಯಾಣ ಯೋಜನೆ.
   ಅ. ವೈಯಕ್ತಿಕ ನೀರಾವರಿ ಕೊಳವೆಬಾವಿ/ತೆರೆದ ಬಾವಿ ಯೋಜನೆ.
   ಆ. ಏತನೀರಾವರಿ ಯೋಜನೆ.
4. ಪ್ರೇರಣಾ (ಮೈಕ್ರೋ ಕ್ರೆಡಿಟ್) ಯೋಜನೆ.
5. ಅರಣ್ಯ ಆಧಾರಿತ ಆದಿವಾಸಿ ಮತ್ತು ಅಲೆಮಾರಿ, ಅರೆಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ **ಜನಾಂಗದವರಿಗಾಗಿ ವಿವಿಧ ಯೋಜನೆ.**
6. ಕಾಫಿ ಬೆಳೆಗಾರರ ಸಮಗ್ರ ಅಭಿವೃದ್ಧಿ ಯೋಜನೆ.

**ಯೋಜನೆಗಳ ವಿವರ ಈ ಕೆಳಕಂಡಂತಿದೆ:-**

**1. ಸ್ವಯಂ ಉದ್ಯೋಗ ಕಾರ್ಯಕ್ರಮಗಳು:-**

**ಅ. ಸ್ವಯಂ ಉದ್ಯೋಗ ನೇರಸಾಲ ಯೋಜನೆ:-**

ಸ್ವಯಂ ಉದ್ಯೋಗ ನೇರಸಾಲ ಯೋಜನೆಯಡಿ ಪರಿಶಿಷ್ಟ ಪಂಗಡದವರಿಗಾಗಿ ಸಣ್ಣ ಪ್ರಮಾಣದ ವ್ಯಾಪಾರಕ್ಕಾಗಿ ಘಟಕವೆಚ್ಚ ರೂ.50,000/-ಗಳಾಗಿದ್ದು, ಇದರಲ್ಲಿ ಶೇ.50ರಷ್ಟು ಸಹಾಯಧನ ಮತ್ತು ಶೇ.50ರಷ್ಟು ನಿಗಮದ ಸಾಲವಾಗಿರುತ್ತದೆ. ಸಣ್ಣ ಪ್ರಮಾಣದ ವ್ಯಾಪಾರಗಳಾದ ಹ್ಯಾಂಡಿಕ್ರಾಫ್ಟ್ ಶಾಪ್, ಬಿದಿರಿನ ಅಂಗಡಿ, ಹೂವು ಶೃಂಗರಿಸುವ ಮಳಿಗೆ ಸ್ಥಾಪನೆಗೆ, ರೆಡಿಮೇಡ್ ಗಾರ್ಮೆಂಟ್ಸ್ ಶಾಪ್, ಕಾಂಕ್ರಿಟ್ ವೆಲ್‌ರಿಂಗ್ ಮೇಕರ್‌ಗಾಗಿ, ಆಡು ಮತ್ತು ಮೇಕೆ ಸಾಕಾಣಿಕೆ, ಮೀನು ವ್ಯಾಪಾರಕ್ಕಾಗಿ, ಬೀದಿ ವ್ಯಾಪಾರಗಳಾದ ಎಳನೀರು, ಪಾನಿಪುರಿ, ತರಕಾರಿ, ಹಣ್ಣು, ಹೂ ವ್ಯಾಪಾರ, ಟೈಲರಿಂಗ್, ಕಿರಾಣಿ ಅಂಗಡಿ, ಬಟ್ಟೆ ವ್ಯಾಪಾರ, ಮಾಂಸ ಮತ್ತು ಕೋಳಿ ವ್ಯಾಪಾರ, ಹೈನುಗಾರಿಕೆ, ಎಲೆಕ್ಟ್ರಿಕಲ್ ಶಾಪ್, ಅಕ್ಕಿ ರುಬ್ಬುವ ಯಂತ್ರ ಸ್ಥಾಪನೆಗಾಗಿ, ತೆಂಗಿನಕಾಯಿ ಡಿ-ಸೆಲ್ಲಿಂಗ್ ಮಿಷಿನ್ ಇತ್ಯಾದಿ.

**ಆ. ಸ್ವಯಂ ಉದ್ಯೋಗ ಉದ್ಯಮಶೀಲತಾ ಅಭಿವೃದ್ಧಿ ಯೋಜನೆ:-**

ಸ್ವಯಂ ಉದ್ಯೋಗ ಉದ್ಯಮಶೀಲತಾ ಅಭಿವೃದ್ಧಿ ಯೋಜನೆಯಡಿ ಪರಿಶಿಷ್ಟ ಪಂಗಡದವರು ಇಚ್ಚಿಸಿದ ಉದ್ಯಮ ಕೈಗೊಳ್ಳಲು ಬ್ಯಾಂಕ್ ಸಹಯೋಗದೊಂದಿಗೆ ಸಾಲ-ಸೌಲಭ್ಯ ಕಲ್ಪಿಸಲಾಗುವುದು. ಈ ಯೋಜನೆಯಡಿ ಪ್ರತಿ ಫಲಾಪೇಕ್ಷಿಗೆ ಗರಿಷ್ಠ ರೂ.2.00 ಲಕ್ಷಗಳ ಮಿತಿಗೆ ಒಳಪಟ್ಟಂತೆ ಘಟಕ ವೆಚ್ಚದ ಶೇ.70% ರಷ್ಟು ಹಣವನ್ನು ಸಹಾಯಧನವನ್ನಾಗಿ ನೀಡಲಾಗುವುದು. ಘಟಕವೆಚ್ಚದ ಉಳಿದ ಭಾಗ ಬ್ಯಾಂಕ್‌ಸಾಲವಾಗಿರುತ್ತದೆ.

**ಇ. ಉದ್ಯಮಶೀಲತಾ ಅಭಿವೃದ್ಧಿ ಯೋಜನೆ:-**

ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ/ಯುವತಿಯರು ಸಣ್ಣ ಕೈಗಾರಿಕೆ, ಸೇವಾ ಕ್ಷೇತ್ರ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ನಿಗಮದ ಸಹಾಯಧನ ಮತ್ತು ಬ್ಯಾಂಕಿನ ಸಾಲ ವ್ಯವಸ್ಥೆಯೊಂದಿಗೆ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು. ಈ ಯೋಜನೆಯಡಿ ಪ್ರತಿ ಫಲಾಪೇಕ್ಷಿಗೆ ಗರಿಷ್ಠ ರೂ.3.50 ಲಕ್ಷಗಳ ಮಿತಿಗೆ ಒಳಪಟ್ಟಂತೆ ಘಟಕ ವೆಚ್ಚದ ಶೇ.70% ರಷ್ಟು ಹಣವನ್ನು ಸಹಾಯಧನವನ್ನಾಗಿ ನೀಡಲಾಗುವುದು. ಘಟಕವೆಚ್ಚದ ಉಳಿದ ಭಾಗ ಬ್ಯಾಂಕ್‌ಸಾಲವಾಗಿರುತ್ತದೆ.

**ಸರಕು ವಾಹನಗಳಿಗೆ ಗರಿಷ್ಠ ರೂ..3.50 ಲಕ್ಷ ಸಹಾಯಧನವನ್ನು ಮಿತಿಗೊಳಿಸಿ ಹಾಗೂ ಬ್ಯಾಂಕ್ ಸಾಲದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.**

2. ಭೂ ಒಡೆತನ ಯೋಜನೆ (ಪೃಥ್ವಿ):-

- ಈ ಯೋಜನೆಯಡಿ ಪರಿಶಿಷ್ಟ ಪಂಗಡದ ಭೂ ರಹಿತ ಕೃಷಿ ಕಾರ್ಮಿಕರ ಮಹಿಳೆಯರನ್ನು ಭೂ ಒಡೆಯರನ್ನಾಗಿ ಮಾಡುವ ಉದ್ದೇಶದಿಂದ ಸದರಿ ಯೋಜನೆಯಡಿ ನಿಗಧಿಪಡಿಸಿದ ಘಟಕವೆಚ್ಚದಲ್ಲಿ ಎಷ್ಟು ವಿಸ್ತೀರ್ಣ ಜಮೀನು ದೊರಕುತದೆಯೋ ಅಷ್ಟು ವಿಸ್ತೀರ್ಣದ ಜಮೀನನ್ನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿರದ ಭೂ ಮಾಲೀಕರಿಂದ ಖರೀದಿಸಿ ನೇರವಾಗಿ ಫಲಾನುಭವಿಯ ಹೆಸರಿಗೆ ನೊಂದಣಿ ಮಾಡಿಸಿಕೊಡಲಾಗುವುದು.
- ಬೆಂಗಳೂರು ನಗರ ಮತ್ತು ಗ್ರಾಮಾಂತರ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸೀಮಿತಗೊಂಡಂತೆ ಈ ಯೋಜನೆಯಡಿ ಘಟಕವೆಚ್ಚವನ್ನು ರೂ.15.00 ಲಕ್ಷಗಳಿಂದ ರೂ.20.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.
- ಉಳಿದ ಜಿಲ್ಲೆಗಳಲ್ಲಿ ಘಟಕವೆಚ್ಚ ರೂ.15.00 ಲಕ್ಷಗಳಿದ್ದು, ಇದರಲ್ಲಿ ಸಹಾಯಧನ ಮತ್ತು ಅವಧಿಸಾಲ 50:50ರ ಅನುಪಾತದಲ್ಲಿರುತ್ತದೆ. ಅವಧಿಸಾಲಕ್ಕೆ ವಾರ್ಷಿಕ ಶೇ.6ರ ದರದಲ್ಲಿ ಬಡ್ಡಿ ವಿಧಿಸಲಾಗುವುದು. ಸಾಲ ಮತ್ತು ಬಡ್ಡಿಯನ್ನು 10 ವರ್ಷಗಳ ಅವಧಿಯಲ್ಲಿ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ.

3. ಸಮಗ್ರ ಗಂಗಾ ಕಲ್ಯಾಣ ಯೋಜನೆ:-

**(ಅ) ವೈಯಕ್ತಿಕ ನೀರಾವರಿ ಕೊಳವೆ ಬಾವಿ /ತೆರೆದ ಬಾವಿ ಯೋಜನೆ :**

ಈ ಯೋಜನೆಯಲ್ಲಿ ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತೀಸಣ್ಣ ರೈತರ ಜಮೀನಿನಲ್ಲಿ ಕೊಳವೆ ಬಾವಿ ಕೊರೆದು ಪಂಪ್‌ಸೆಟ್ ಹಾಗೂ ಇತರೆ ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಿ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲಾಗುವುದು.

- ಘಟಕವೆಚ್ಚ ರೂ.3.50 ಲಕ್ಷ ಇದ್ದು ರೂ.3.00 ಸಹಾಯಧನ ಮತ್ತು ರೂ.50,000/- ಅವಧಿ ಸಾಲವಾಗಿರುತ್ತದೆ. ಸಹಾಯಧನ ರೂ.3.00 ಲಕ್ಷಗಳಲ್ಲಿ ವಿದ್ಯುದ್ದೀಕರಣ ಬಾಬ್ತು ರೂ.50,000/-ಗಳು ಒಳಗೊಂಡಿರುತ್ತದೆ. ನಿಗಮವು ನೀಡುವ ಸಾಲಕ್ಕೆ ವಾರ್ಷಿಕ ಶೇ.6ರಷ್ಟು ಬಡ್ಡಿ ಇದ್ದು, ಸಾಲ ಮತ್ತು ಬಡ್ಡಿಯನ್ನು 6ವರ್ಷಗಳಲ್ಲಿ ಅರ್ಧ ವಾರ್ಷಿಕ ಕಂತುಗಳಲ್ಲಿ ಮರು ಪಾವತಿ ಮಾಡಬೇಕಾಗಿರುತ್ತದೆ.
- ಅಂತರ್ಜಲಮಟ್ಟ ಕುಸಿದಿರುವ ಜಿಲ್ಲೆಗಳಾದ ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರು ಜಿಲ್ಲೆಗಳಿಗೆ ಘಟಕವೆಚ್ಚವನ್ನು ರೂ.4.50 ಲಕ್ಷಗಳಿಗೆ ನಿಗಧಿಪಡಿಸಿದ್ದು, ರೂ.4.00 ಲಕ್ಷ ಸಹಾಯಧನ ಹಾಗೂ ರೂ.50,000/- ಅವಧಿ ಸಾಲವಾಗಿರುತ್ತದೆ. ಸಹಾಯಧನ ರೂ.4.00 ಲಕ್ಷಗಳಲ್ಲಿ ವಿದ್ಯುದ್ದೀಕರಣದ ಬಾಬ್ತು ರೂ.50,000/-ಗಳು ಒಳಗೊಂಡಿರುತ್ತದೆ. ನಿಗಮವು ನೀಡುವ ಸಾಲಕ್ಕೆ ವಾರ್ಷಿಕ ಶೇ.6ರಷ್ಟು ಬಡ್ಡಿ ಇದ್ದು, ಸಾಲ ಮತ್ತು ಬಡ್ಡಿಯನ್ನು 6 ವರ್ಷಗಳಲ್ಲಿ ಅರ್ಧ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ.

**(ಆ) ಏತನೀರಾವರಿ ಯೋಜನೆ:**

ಏತನೀರಾವತಿ ಯೋಜನೆಯಡಿ ನೈಸರ್ಗಿಕವಾದ ನದಿ, ತೊರೆ,ನಾಲೆಗಳ ಅಕ್ಕಪಕ್ಕದಲ್ಲಿರುವ ಪರಿಶಿಷ್ಟ ಪಂಗಡದ ಕನಿಷ್ಟ 03 ಫಲಾನುಭವಿಗಳು ಸಣ್ಣ ಮತ್ತು ಅತಿಸಣ್ಣ ರೈತರುಗಳ ಜಮೀನುಗಳಿಗೆ ಪಂಪ್‌ಸೆಟ್ ಮತ್ತು ಪೈಪ್‌ಲೈನ್ ಅಳವಡಿಸಿ ಉಚಿತವಾಗಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು. ಈ ಯೋಜನೆಯಡಿ ಘಟಕವೆಚ್ಚವು ಕನಿಷ್ಟ 08 ಎಕರೆ ಖುಷ್ಕಿ ಜಮೀನಿನ ಘಟಕಕ್ಕೆ ರೂ.4.00 ಲಕ್ಷ ಮತ್ತು 15 ಎಕರೆ ಜಮೀನಿನ ಘಟಕಕ್ಕೆ ರೂ.6.00 ಲಕ್ಷ ಇರುತ್ತದೆ.

4. ಪ್ರೇರಣಾ (ಮೈಕ್ರೋ ಕ್ರೆಡಿಟ್) ಯೋಜನೆ:-

ಈ ಯೋಜನೆಯಡಿ ಸ್ವಸಹಾಯ ಸಂಘಗಳಲ್ಲಿ ಸದಸ್ಯರಾಗಿರುವ ಪರಿಶಿಷ್ಟ ಪಂಗಡದ ಮಹಿಳೆಯರು ಲಾಭ ಗಳಿಸುವಂತಹ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಪ್ರತಿ ಪರಿಶಿಷ್ಟ ಪಂಗಡದ ಸದಸ್ಯರಿಗೆ ರೂ.15,000/- ಸಹಾಯಧನ ಮತ್ತು ರೂ.10,000/- ಸಾಲ, ಒಟ್ಟು ರೂ.25,000/-ಗಳನ್ನು ಮಂಜೂರು ಮಾಡಿ ಸಂಘಕ್ಕೆ ಬಿಡುಗಡೆ ಮಾಡಲಾಗುವುದು. ಸಹಾಯಧನ ಮತ್ತು ಸಾಲ ಎರಡನ್ನೂ ನಿಗಮದಿಂದಲೇ ನೀಡಲಾಗುತ್ತಿದ್ದು, ಸಾಲದ ಹಣಕ್ಕೆ ಶೇ.4ರ ದರದಲ್ಲಿ ಬಡ್ಡಿ ವಿಧಿಸಲಾಗುತ್ತದೆ. ಸಂಘಗಳು ಸಾಲ ಮತ್ತು ಬಡ್ಡಿಯನ್ನು 36 ಮಾಸಿಕ ಕಂತುಗಳಲ್ಲಿ ಅಥವಾ 12 ತ್ರೈಮಾಸಿಕ ಕಂತುಗಳಲ್ಲಿ ನಿಗಮಕ್ಕೆ ಮರು ಪಾವತಿ ಮಾಡಬೇಕಾಗಿರುತ್ತದೆ.

5. **ಅರಣ್ಯ ಆಧಾರಿತ ಆದಿವಾಸಿ ಮತ್ತು ಅಲೆಮಾರಿ, ಅರೆಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಜನಾಂಗದವರಿಗಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.**

- ಸ್ವಯಂ ಉದ್ಯೋಗ ಯೋಜನೆಯಡಿ ಸಣ್ಣ ಪ್ರಮಾಣದ ವ್ಯಾಪಾರಕ್ಕಾಗಿ ಘಟಕವೆಚ್ಚ ರೂ.50,000/–ಗಳಾಗಿದ್ದು, ಇದರಲ್ಲಿ ಶೇ.50ರಷ್ಟು ಸಹಾಯಧನ ಮತ್ತು ಶೇ.50ರಷ್ಟು ನಿಗಮದ ಸಾಲವಾಗಿರುತ್ತದೆ.
- ಸ್ವಯಂ ಉದ್ಯೋಗ ಉದ್ಯಮಶೀಲತಾ ಅಭಿವೃದ್ಧಿ ಯೋಜನೆಯಡಿ ಪ್ರತಿ ಫಲಾಪೇಕ್ಷಿಗೆ ಗರಿಷ್ಠ ರೂ.2.00 ಲಕ್ಷಗಳ ಮಿತಿಗೆ ಒಳಪಟ್ಟಂತೆ ಘಟಕ ವೆಚ್ಚದ ಶೇ.70% ರಷ್ಟು ಹಣವನ್ನು ಸಹಾಯಧನವನ್ನಾಗಿ ನೀಡಲಾಗುವುದು. ಘಟಕವೆಚ್ಚದ ಉಳಿದ ಭಾಗ ಬ್ಯಾಂಕ್‌ಸಾಲವಾಗಿರುತ್ತದೆ.
- ಸ್ವಯಂ ಉದ್ಯೋಗ ಉದ್ಯಮಶೀಲತಾ ಅಭಿವೃದ್ಧಿ ಯೋಜನೆಯಡಿ ಪ್ರತಿ ಫಲಾಪೇಕ್ಷಿಗೆ ಗರಿಷ್ಠ ರೂ.3.50 ಲಕ್ಷಗಳ ಮಿತಿಗೆ ಒಳಪಟ್ಟಂತೆ ಘಟಕ ವೆಚ್ಚದ ಶೇ.70% ರಷ್ಟು ಹಣವನ್ನು ಸಹಾಯಧನವನ್ನಾಗಿ ನೀಡಲಾಗುವುದು. ಘಟಕವೆಚ್ಚದ ಉಳಿದ ಭಾಗ ಬ್ಯಾಂಕ್‌ಸಾಲವಾಗಿರುತ್ತದೆ.
- ಈ ಜನಾಂಗದವರಿಗಾಗಿ **ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣ ಉದ್ದೇಶಕ್ಕಾಗಿ 'ಪ್ರೇರಣಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಜನಾಂಗದ ನಿರುದ್ಯೋಗಿ ಮಹಿಳೆಯರು ಲಾಭಗಳಿಸುವಂತಹ ಸಣ್ಣ ಪ್ರಮಾಣದ ಸ್ವ–ಉದ್ಯೋಗ ಚಟುವಟಿಕೆಗಳನ್ನು ಪ್ರಾರಂಭಿಸಲು ಈ ಯೋಜನೆಯಡಿ ಆರ್ಥಿಕ ನೆರವನ್ನು ಕಲ್ಪಿಸಲಾಗುತ್ತದೆ.** ಘಟಕ ವೆಚ್ಚ ಪ್ರತಿ ಸಂಘಕ್ಕೆ ಕನಿಷ್ಠ ರೂ.2.50 ಲಕ್ಷ (ಸಂಘದ ಪ್ರತಿ ಸದಸ್ಯರಿಗೆ ಸಹಾಯಧನ ರೂ.0.15 ಲಕ್ಷ ಮತ್ತು ಸಾಲ ರೂ.0.10 ಲಕ್ಷ, ಒಟ್ಟು ರೂ.0.25 ಲಕ್ಷ) ಗಳಾಗಿರುತ್ತದೆ.

6. **ಕಾಫಿ ಬೆಳೆಯ ಸಮಗ್ರ ಅಭಿವೃದ್ಧಿ ಯೋಜನೆ:**

- ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟ, ಕೊಡಗು ಜಿಲ್ಲೆಯ, ವಿರಾಜಪೇಟೆ ತಾಲ್ಲೂಕು ಮತ್ತು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಆದಿವಾಸಿ ಸಮುದಾಯದವರು ಬೆಳೆಯುತ್ತಿರುವ ಕಾಫಿ ಮತ್ತು ಕರಿಮೆಣಸು ಬೆಳೆಗಳ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ಕಾಫಿ ಮಂಡಳಿಯ ಸಹಯೋಗದೊಂದಿಗೆ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.
- ಈ ಅಭಿವೃದ್ಧಿ ಯೋಜನೆಯಡಿ ಆದಿವಾಸಿ ಸಮುದಾಯದವರು ಒಟ್ಟು 2660 ರೈತ ಫಲಾನುಭವಿಗಳನ್ನು ಒಳಗೊಂಡಿದ್ದು, ಯೋಜನಾ ವೆಚ್ಚವು ರೂ.15.09 ಕೋಟಿಗಳಾಗಿದ್ದು, ಈ ಯೋಜನೆಯನ್ನು 04 ವರ್ಷಗಳಲ್ಲಿ ಹಂತ ಹಂತವಾಗಿ ಅಭಿವೃದ್ಧಿಗೊಳಿಸಲಾಗುತ್ತಿದೆ. ನಿಗಮದಿಂದ ರೂ.9.53 ಕೋಟಿ ಸಹಾಯಧನ ಮತ್ತು ರೂ.56.89 ಲಕ್ಷ ಸರಕು ಮಂಡಳಿಯಿಂದ ಮತ್ತು ರೂ.4.99 ಕೋಟಿ ಫಲಾನುಭವಿಗಳಿಂದ ಭರಿಸಲಾಗುವುದು. ಈ ಯೋಜನೆಯನ್ನು ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲಾಗುವುದು.
- ಈ ಯೋಜನೆಯಡಿ ಈಗಾಗಲೇ ಕಾಫಿ ಬೆಳೆ ಬೆಳೆಯುವಲ್ಲಿ ನಿರತರಾಗಿರುವ ಮತ್ತು ಹೊಸದಾಗಿ ಕಾಫಿ ಬೆಳೆ ಬೆಳೆಯುವಲ್ಲಿ ಉತ್ಸುಕವಾಗಿರುವ ಆದಿವಾಸಿ ಸಮುದಾಯದವರಿಗೆ ಅವರ ಬೆಳೆಯನ್ನು ಅಭಿವೃದ್ಧಿ ಪಡಿಸಿಕೊಳ್ಳುವಲ್ಲಿ ಅಗತ್ಯವಿರುವ ಯಂತ್ರೋಪಕರಣಗಳು, ತಾಂತ್ರಿಕ ಸಲಹೆ, ಸಂಸ್ಕರಣೆ, ಮತ್ತು ಉತ್ತಮ ಮಾರುಕಟ್ಟೆಯನ್ನು ಕಲ್ಪಿಸಲಾಗುತ್ತಿದೆ.

ವ್ಯವಸ್ಥಾಪಕ ನಿರ್ದೇಶಕರು

# ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಂ.177/4 2ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಭೋವಿ ಪಾಳ್ಯ, ಮಹಾಲಕ್ಷ್ಮೀಪುರಂ,
ಬೆಂಗಳೂರು-560086, ದೂರವಾಣಿ ಸಂಖ್ಯೆ: 080-23198122/133; ಫ್ಯಾಕ್ಸ್:080-231981144,
ಇ-ಮೇಲ್ ವಿಳಾಸ : md.kbdc@gmail.com

ಸಂಖ್ಯೆ:ಕಭೋಅನಿ/ವಿ.ಸ/ವಿ.ಪ/15/11ಅ/2021-22 ದಿನಾಂಕ:10-12-2021

ಗೆ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು /6
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು

ಮಾನ್ಯರೇ,

ವಿಷಯ : 15 ನೇ ವಿಧಾನಸಭೆಯ 11 ನೇ ಅಧಿವೇಶನಕ್ಕೆ ಸಂಬಂಧಿಸಿದಂತೆ ಚುಕ್ಕೆ ಗುರುತಿನ /ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ದಿನಾಂಕ:17-12-2021 ರಂದು ಉತ್ತರಿಸುವ ಬಗ್ಗೆ.

ಉಲ್ಲೇಖ : ಸರ್ಕಾರದ ಪತ್ರ ಸಂಖ್ಯೆ:ಎಲ್‌ಸಿಕ್ಯೂ/15ನೇವಿಸ/11ಅ/ಚು.ಗು/ಚುರ.ಪ್ರಶ್ನೆ/03/2021. ದಿನಾಂಕ:04-12-2021.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ **ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)** ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:628 ಕ್ಕೆ ಉತ್ತರವನ್ನು ತಯಾರಿಸಿ ತಮ್ಮ ಘನ ಅವಗಾಹನೆಗಾಗಿ ವಿನಯ ಪೂರ್ವಕವಾಗಿ ಸಲ್ಲಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು

# ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ

**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿನ/ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 628 ಕ್ಕೆ ಉತ್ತರ**

**ಉತ್ತರಿಸಬೇಕಾದ ದಿನಾಂಕ : 17-12-2021**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ನಿಗಮಗಳಲ್ಲಿ ಜಾರಿಯಲ್ಲಿರುವಸಹಾಯನುಧನದ ಯೋಜನೆಗಳಾವುವು; (ಯೋಜನಾವಾರು ಮಾಹಿತಿ ನೀಡುವುದು) | 1. ಸ್ವಯಂ ಉದ್ಯೋಗ (ನೇರಸಾಲ) ಯೋಜನೆ<br>2. ಉದ್ಯಮ ಶೀಲತಾ ಯೋಜನೆ<br>3. ಮೈಕ್ರೋ ಕ್ರೆಡಿಟ್ ಯೋಜನೆ<br>4. ಭೂ ಒಡೆತನ ಯೋಜನೆ<br>5. ಗಂಗಾ ಕಲ್ಯಾಣ ಯೋಜನೆ |
| ಆ. | ಸಮೃದ್ಧಿ ಯೋಜನೆ ಎಂದರೇನು; ಈ ಯೋಜನೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ; ಇದರ ರೂಪ ರೇಷೆಗಳೇನು; ಹಾಲಿ ಸದರಿ ಯೊಜನೆಯು ಜಾರಿಯಲ್ಲಿದೆಯೇ; (ವಿವರವಾದ ಮಾಹಿತಿ ನೀಡುವುದು) | 2018-19ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ನಿರುದ್ಯೋಗಿ ಯುವಕ/ಯುವತಿಯರಿಗೆ ಸಮೃದ್ಧಿ ಯೋಜನೆಯಡಿ ಆದಾಯ ಬರುವಂತಹ ಆರ್ಥಿಕ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ವಿವಿಧ ಸಂಸ್ಥೆಗಳೊಂದಿಗೆ ಮಾರುಕಟ್ಟೆ/ತಾಂತ್ರಿಕ ಬೆಂಬಲ ಪಡೆಯಲು ಒಡಂಬಡಿಕೆ ಮಾಡಿಕೊಂಡು, ಫಲಾನುಭವಿಗಳು ಸ್ವಯಂ ಉದ್ಯೋಗ ಘಟಕಗಳನ್ನು ಸ್ಥಾಪಿಸುವ ಮೂಲಕ ಉದ್ಯಿಮೆದಾರರಾಗಲು ಬ್ರಾಂಡೆಂಡ್ ಸಂಸ್ಥೆಗಳ ಸಹಯೋಗದಿಂದ ಸಮೃದ್ಧಿ ಯೋಜನೆಯನ್ನು ಅನುಷ್ಟಾನಗೊಳಿಸುವುದು.<br><br>2018-19 ನೇ ಸಾಲಿನಲ್ಲಿ ಮಾತ್ರ ಈ ಯೋಜನೆಯನ್ನು ಅನುಷ್ಟಾನಗೊಳಿಸಲಾಗಿದೆ.<br><br>ಸದರಿ ಯೋಜನೆಯು 2021-2022 ನೇ ಸಾಲಿನಲ್ಲಿ ಜಾರಿಯಲ್ಲಿರುವುದಿಲ್ಲ. |

| | | |
|---|---|---|
| ಇ. | 2015 ನೇ ಸಾಲಿನಿಂದ ಮೈಸೂರು ಮತ್ತು ತುಮಕೂರು ಜಿಲ್ಲೆಯಲ್ಲಿ ಸಮೃದ್ಧಿ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳು ಯಾರು ಯಾರು? (ಹೆಸರು, ವಿಳಾಸ, ಯೋಜನೆಗಳೊಂದಿಗೆ ವರ್ಷ ಮಾಹಿತಿ ನೀಡುವುದು) | (see table below) |
| ಈ. | ಸದರಿ ಯೋಜನೆಯಲ್ಲಿ ಆಯ್ಕೆಯಾದ ಎಷ್ಟು ಫಲಾನುಭವಿಗಳಿಗೆ ಈಗಾಗಲೇ ಸಹಾಯ ಧನ ವಿತರಣೆ ಮಾಡಲಾಗಿದೆ; ಉಳಿದವರೆಷ್ಟು; ಇವರಿಗೆ ವಿತರಣೆ ಮಾಡದಿರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ವಿತರಣೆ ಮಾಡಲಾಗುವುದು; (ವಿವರವಾದ ಮಾಹಿತಿ ನೀಡುವುದು) | ತುಮಕೂರು ಜಿಲ್ಲೆಯಲ್ಲಿ 05 ಫಲಾನುಭವಿಗಳು ಆಯ್ಕೆಯಾಗಿದ್ದು 01 ಫಲಾನುಭವಿಗೆ ಸಹಾಯಧನ ವಿತರಣೆ ಮಾಡಲಾಗಿದೆ. ಉಳಿದ 04 ಫಲಾನುಭವಿಗಳು ದಾಖಲಾತಿ ಸಲ್ಲಿಸದೆ ಇರುವುದರಿಂದ ಸಹಾಯಧನ ವಿತರಣೆ ಮಾಡಿರುವುದಿಲ್ಲ. ಫಲಾನುಭವಿಗಳು ದಾಖಲಾತಿ ಸಲ್ಲಿಸಿದ ತಕ್ಷಣ ಸಹಾಯಧನ ವಿತರಣೆ ಮಾಡಲಾಗುವುದು.<br><br>ಮೈಸೂರು ಜಿಲ್ಲೆಯಲ್ಲಿ 05 ಫಲಾನುಭವಿಗಳು ಆಯ್ಕೆಯಾಗಿದ್ದು 05 ಫಲಾನುಭವಿಗಳಿಗೆ ಸಹಾಯಧನ ವಿತರಣೆ ಮಾಡಲಾಗಿದೆ. |
| ಉ. | 2019 ರಿಂದ ಇಲ್ಲಿಯವರೆಗೆ ಸದರಿ ಯೋಜನೆಯಡಿ ಅರ್ಜಿಗಳನ್ನು ಕರೆಯದಿರಲು ಕಾರಣಗಳೇನು? (ವಿವರವಾದ ಮಾಹಿತಿ ನೀಡುವುದು) | ಸರ್ಕಾರದ ಆಯವ್ಯಯದಲ್ಲಿ ಸದರಿ ಯೋಜನೆಗೆ ಅನುದಾನವನ್ನು ನಿಗದಿಪಡಿಸದೇ ಇರುವುದರಿಂದ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಿಲ್ಲ. |

Table for item ಇ.:

| ಕ್ರ.ಸ | ಜಿಲ್ಲೆ | 2015 | 2016 | 2017 | 2018 | 2019 | 2020 | 2021 |
|---|---|---|---|---|---|---|---|---|
| 1 | ಮೈಸೂರು | – | – | – | ಅನುಬಂಧ-1 ರಲ್ಲಿ ಲಗತ್ತಿಸಿದೆ. | – | – | – |
| 2 | ತುಮಕೂರು | – | – | – | ಆಂಜನೇಯಲು ಬಿನ್ ವೆಂಕಟೇಶ್, ವಿನಾಯಕನಗರ, ಪಾವಗಡ ತಾಲ್ಲೂಕು | | | |

R. Seely

ವ್ಯವಸ್ಥಾಪಕ ನಿರ್ದೇಶಕರು

# ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | | 628 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | | ಶ್ರೀ/ಶ್ರೀಮತಿ ಕೆ.ಟಿ. ಶ್ರೀ ಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | | 17.12.2021 |
| ವಿಷಯ | | ಸಮೃದ್ಧಿ ಯೋಜನೆಯ ಫಲಾನುಭವಿಗಳಿಗೆ ಪರಿಹಾರ ಧನ ವಿತರಿಸದೇ ಇರುವ ಬಗ್ಗೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ನಿಗಮಗಳಲ್ಲಿ ಜಾರಿಯಲ್ಲಿರುವ ಸಹಾಯಧನದ ಯೋಜನೆಗಳಾವುವು (ಯೋಜನಾವಾರು ಮಾಹಿತಿ ನೀಡುವುದು) | ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಲ್ಲಿ ಜಾರಿಯಲ್ಲಿ ಸಹಾಯಧನ ಯೋಜನೆಗಳ ವಿವರ ಈ ಕೆಳಕಂಡಂತಿದೆ.<br>1. ನೇರಸಾಲ ಯೋಜನೆ<br>2. ಉದ್ಯಮಶೀಲತಾ ಯೋಜನೆ<br>3. ಮೈಕ್ರೋಕ್ರೆಡಿಟ್ ಯೋಜನೆ<br>4. ಗಂಗಾ ಕಲ್ಯಾಣ ಯೋಜನೆ<br>5. ಭೂ ಒಡೆತನ ಯೋಜನೆ<br>6. ಐರಾವತ ಯೋಜನೆ<br>7. ಸಮೃದ್ಧಿ ಯೋಜನೆ |
| ಆ. | ಸಮೃದ್ಧಿ ಯೋಜನೆ ಎಂದರೇನು : ಈ ಯೋಜನೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ; ಇದರ ರೂಪು ರೇಷೆಗಳೇನು ಹಾಲಿ ಸದರಿ ಯೋಜನೆಯು ಜಾರಿಯಲ್ಲಿದೆಯೇ; (ವಿವರವಾದ ಮಾಹಿತಿ ನೀಡುವುದು) | 2018-19ನೇ ಸಾಲಿನಲ್ಲಿ ಸರ್ಕಾರಿ ಮತ್ತು ಖಾಸಗಿ ಬ್ರಾಂಡೆಂಡ್ ಸಂಸ್ಥೆಗಳ ಸಹಯೋಗದೊಂದಿಗೆ ಆದಾಯ ತರುವ ಆರ್ಥಿಕ ಚಟುವಟಿಕೆಗಳನ್ನು ನಗರ ಹಾಗೂ ಗ್ರಾಮೀಣಾ ಪ್ರದೇಶಗಳಲ್ಲಿ ಘಟಕವನ್ನು ಪ್ರಾರಂಭಿಸಲು ಘೋಷಿಸಲಾದ ಯೋಜನೆಯಾಗಿದೆ. |
| ಇ. | 2015ನೇ ಸಾಲಿನಿಂದ ಮೈಸೂರು ಮತ್ತು ತುಮಕೂರು ಜಿಲ್ಲೆಯಲ್ಲಿ ಸಮೃದ್ಧಿ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳು ಯಾರು ಯಾರು; (ಹೆಸರು, ವಿಳಾಸ, ಯೋಜನೆಯೊಂದಿಗೆ ವರ್ಷವಾರು ಮಾಹಿತಿ ನೀಡುವುದು) | ಸಮೃದ್ಧಿ ಯೋಜನೆಯನ್ನು ಡಾ॥ ಬಿ.ಆರ್. ಅಂಬೇಡ್ಕ ರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿದ್ದು, ಸದರಿ ನಿಗಮದಿಂದ ಮಾಹಿತಿಯನ್ನು ಸಲ್ಲಿಸಬೇಕು. |
| ಈ | ಸದರಿ ಯೋಜನೆಯಲ್ಲಿ ಆಯ್ಕೆಯಾದ ಎಷ್ಟು ಫಲಾನುಭವಿಗಳಿಗೆ ಈಗಾಗಲೇ ಸಹಾಯ ಧನ ವಿತರಣೆ ಮಾಡಲಾಗಿದೆ; ಉಳಿದವರೆಷ್ಟು; ಇವರಿಗೆ ವಿತರಣೆ ಮಾಡದಿರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ವಿತರಣೆ ಮಾಡಲಾಗುವುದು; (ವಿವರವಾದ ಮಾಹಿತಿ ನೀಡುವುದು) | |
| ಉ | 2019 ರಿಂದ ಇಲ್ಲಿಯವರೆಗೆ ಸದರಿ ಯೋಜನೆಯಡಿ ಅರ್ಜಿಗಳನ್ನು ಕರೆಯದಿರಲು ಕಾರಣಗಳೇನು? (ವಿವರವಾದ ಮಾಹಿತಿ ನೀಡುವುದು. | 2018-19ನೇ ಸಾಲಿನ ನಂತರದ ಆರ್ಥಿಕ ವರ್ಷಗಳಲ್ಲಿ ಸದರಿ ಯೋಜನೆಗೆ ಅನುದಾನ ನಿಗಧಿಯಾಗಿರುವುದಿಲ್ಲ ಆದ್ದರಿಂದ ಅರ್ಜಿಯನ್ನು ಆಹ್ವಾನಿಸಿರುವುದಿಲ್ಲ. |

ವ್ಯವಸ್ಥಾಪಕ ನಿರ್ದೇಶಕರು